# ಸ್ತೋತ್ರಾನುಕ್ರಮಣಿಕೆ


| ಸ್ತೋತ್ರ | | ಪುಟಸಂಖ್ಯೆ |
|---|---|---|
| 1. | ಗಂಗಾಷ್ಟಕಮ್ | 1 |
| 2. | ಯಮುನಾಷ್ಟಕಮ್–1 | 12 |
| 3. | ಯಮುನಾಷ್ಟಕಮ್–2 | 21 |
| 4. | ನರ್ಮದಾಷ್ಟಕಮ್ | 33 |
| 5. | ಮಣಿಕರ್ಣಿಕಾಷ್ಟಕಮ್ | 42 |

# ಗಂಗಾಷ್ಟಕಮ್

**ಭಗವತಿ ಭವಲೀಲಾಮೌಲಿಮಾಲೇ ತವಾಂಭಃ**

**ಕಣಮಣುಪರಿಮಾಣಂ ಪ್ರಾಣಿನೋ ಯೇ ಸ್ಪೃಶಂತಿ ||**

**ಅಮರನಗರನಾರೀಚಾಮರಗ್ರಾಹಿಣೀನಾಂ**

**ವಿಗತಕಲಿಕಲಂಕಾತಂಕಮಂಕೇ ಲುಠಂತಿ ||೧||**

**ಅನ್ವಯ : ಭಗವತಿ–** ಹೇ ದೇವಿ ಭಗವತಿಯೇ, **ಭವಲೀಲಾಮೌಲಿಮಾಲೇ–** ಶಿವನ ಕಾಂತಿಯುಕ್ತವಾದ ಜಟೆಯ ಮಾಲೆಯಂತಿರುವವಳೇ, **ತವ–** ನಿನ್ನ, **ಅಂಭಃ–** ನೀರಿನ, **ಅಣುಪರಿಮಾಣಂ–** ಒಂದು ಅಣುವಿನ ಪ್ರಮಾಣದ, **ಕಣಂ–** ಕಣವನ್ನಾದರೂ, **ಯೇ ಪ್ರಾಣಿನಃ–** ಯಾವ ಜೀವಿಗಳು, **ಸ್ಪೃಶಂತಿ-** ಸ್ಪರ್ಶಿಸುತ್ತಾರೋ ಅವರು, **ಅಮರನಗರನಾರೀಚಾಮರಗ್ರಾಹಿಣೀನಾಂ–** ಸ್ವರ್ಗವೆಂಬ ದೇವತೆಗಳ ನಗರದಲ್ಲಿನ ಚಾಮರವನ್ನು ಹಿಡಿದಿರುವ ಸ್ತ್ರೀಯರ, **ಅಂಕೇ–** ತೊಡೆಯ ಮೇಲೆ, **ವಿಗತಕಲಿಕಲಂಕಾತಂಕಮ್-** ಎಲ್ಲ ರೀತಿಯ ಕಲಿಗಾಲದ ದೋಷಗಳೆಂಬ ಭಯವನ್ನು ತೊರೆದವರಾಗಿ, **ಲುಠಂತಿ– (**ಆನಂದದಿಂದ) ಹೊರಳಾಡುತ್ತಾರೆ.

**ತಾತ್ಪರ್ಯ**: ಗಂಗೆಯನ್ನು ಉದ್ದೇಶಿಸಿ ಆಕೆಯ ಮಹತ್ತ್ವವನ್ನು ಇಲ್ಲಿ ಹೇಳಲಾಗುತ್ತಿದೆ. ಭಗವತ್ಸ್ವರೂಪಳಾದ ಗಂಗೆಯು ತನ್ನ ನೀರಿನಕಣಗಳೆಂಬ ಮಣಿಗಳಿಂದ ಶಿವನ ಜಟೆಗೆ ಮಾಲೆಯಂತೆ ಅಲಂಕರಿಸಿದ್ದಾಳೆ. ಇಂಥ ಪರಮ ಪವಿತ್ರವಾದ ಗಂಗೆಯ ಒಂದು ಕಣವನ್ನಾದರೂ ಯಾವ ಭಾಗ್ಯವಂತರು ಸ್ಪರ್ಶಿಸುತ್ತಾರೋ ಅಂಥವರು ತಮ್ಮೆಲ್ಲ ಪಾಪಕರ್ಮಗಳಿಂದ ಮುಕ್ತರಾಗುತ್ತಾರೆ. ಅಷ್ಟೇ ಅಲ್ಲ, ಸ್ವರ್ಗಲೋಕದಲ್ಲಿನ ಎಲ್ಲ ಭೋಗಗಳನ್ನು ಹೊಂದಿ ಆನಂದದಿಂದ ವಿಹರಿಸುತ್ತಾರೆ. ಅಷ್ಟೊಂದು ಪುಣ್ಯಪ್ರದಳು ಗಂಗಾಮಾತೆ.

**ಬ್ರಹ್ಮಾಂಡಂ ಖಂಡಯಂತೀ ಹರಶಿರಸಿ ಜಟಾವಲ್ಲಿಮುಲ್ಲಾಸಯಂತೀ**
**ಸ್ವರ್ಲೋಕಾದಾಪತಂತೀ ಕನಕಗಿರಿಗುಹಾಗಂಡಶೈಲಾತ್ ಸ್ಖಲಂತೀ ।**
**ಕ್ಷೋಣೀಪೃಷ್ಠೇ ಲುಠಂತೀ ದುರಿತಚಯಚಮೂರ್ನಿರ್ಭರಂ ಭರ್ತ್ಸಯಂತೀ**
**ಪಾಥೋಧಿಂ ಪೂರಯಂತೀ ಸುರನಗರಸರಿತ್ಪಾವನೀ ನಃ ಪುನಾತು ॥೨॥**

**ಅನ್ವಯ: ಬ್ರಹ್ಮಾಂಡಂ ಖಂಡಯಂತೀ–** ಜಗತ್ತನ್ನೇ ಎರಡು ವಿಭಾಗವಾಗಿಸುತ್ತಿರುವ, **ಹರಶಿರಸಿ–** ಶಿವನ ತಲೆಯಲ್ಲಿ, **ಜಟಾವಲ್ಲಿಮುಲ್ಲಾಸಯಂತೀ-** ಜಟೆಯೆಂಬ ಲತೆಯನ್ನು (ಆರ್ದ್ರಗೊಳಿಸಿ) ಉಲ್ಲಾಸಗೊಳಿಸುತ್ತಿರುವ, **ಸ್ವರ್ಲೋಕಾದಾಪತಂತೀ** - ಸ್ವರ್ಗ-ಲೋಕದಿಂದ ಕೆಳಕ್ಕೆ ಬೀಳುತ್ತಿರುವ, **ಕನಕಗಿರಿಗುಹಾ-ಗಂಡಶೈಲಾತ್ ಸ್ಖಲಂತೀ–** ಮೇರುಪರ್ವತದ ಗುಹೆಯ ಬೃಹತ್ ಶಿಲೆಯ ಬುಡದಿಂದ ಹರಿಯುತ್ತಿರುವ, **ಕ್ಷೋಣೀಪೃಷ್ಠೇ–** ಭೂಮಿಯ ಮೇಲ್ಮೈ ಮೇಲೆ, **ಲುಠಂತೀ–** ಹೊರಳುತ್ತಿರುವ, **ದುರಿತಚಯಚಮೂಃ–** ಪಾಪಗಳ ಸಮೂಹವೆಂಬ ಸೈನ್ಯವನ್ನು, **ನಿರ್ಭರಂ–** ಅತಿಶಯಿತವಾಗಿ, **ಭರ್ತ್ಸಯಂತೀ-** ಸೋಲಿಸುತ್ತಿರುವ, **ಪಾಥೋಧಿಂ–** ಸಮುದ್ರವನ್ನು, **ಪೂರಯಂತೀ-** ಸಮೃದ್ಧಗೊಳಿಸುತ್ತಿರುವ, **ಪಾವನೀ-** ಪವಿತ್ರಳಾದ, **ಸುರನಗರಸರಿತ್–** ದೇವಲೋಕದ ನದಿಯು, **ನಃ-** ನಮ್ಮನ್ನು, **ಪುನಾತು-** ಕಾಪಾಡಲಿ.

**ತಾತ್ಪರ್ಯ-** ಗಂಗಾಮಾತೆಯು ಸ್ವರ್ಗಲೋಕದಿಂದ ಇಳಿಯುವಾಗ ಜಗತ್ತನ್ನೇ ಎರಡು ವಿಭಾಗವನ್ನಾಗಿಸಿ ಹರಿಯುತ್ತಿರುವಳೋ ಎಂಬಂತೆ ಭಾಸವಾಗುತ್ತದೆ. ಜೊತೆಗೆ ಗಂಗೆಯು ಜಲಕಣಗಳಿಂದ ಶಿವನ ಜಟೆಯೆಂಬ ಬಳ್ಳಿಯನ್ನು ಆರ್ದ್ರಗೊಳಿಸಿ ಉಲ್ಲಾಸಗೊಳಿಸುತ್ತಾಳೆ. ಸ್ವರ್ಗಲೋಕದಿಂದ ಧರೆಗಿಳಿಯುವ ಗಂಗೆಯು ಕನಕಗಿರಿಯೆಂದೇ ಪ್ರಸಿದ್ಧವಾಗಿರುವ ಮೇರುಪರ್ವತದ ಶಿಲೋಚ್ಚಯದಿಂದ ಭೂಮಿಯತ್ತ

ಪ್ರವಹಿಸುತ್ತಾ ನಮ್ಮೆಲ್ಲರ ಪಾಪಗಳೆಂಬ ಶತ್ರುಸೈನ್ಯವನ್ನು ಪರಾಜಯಗೊಳಿಸುತ್ತಾ ಸಮುದ್ರವನ್ನು ಸೇರುವಳು. ಇಂಥ ಪರಮ ಪವಿತ್ರಳಾದ, ದೇವಲೋಕದ ನದಿಯಾದ ಗಂಗೆಯು ನಮ್ಮನ್ನೆಲ್ಲ ಕಾಪಾಡಲಿ.

**ಮಜ್ಜನ್ಮಾತಂಗಕುಂಭಚ್ಯುತಮದಮದಿರಾಮೋದಮತ್ತಾಲಿಜಾಲಂ**
**ಸ್ನಾನೈಃ ಸಿದ್ಧಾಂಗನಾನಾಂ ಕುಚಯುಗವಿಲಸತ್ಕುಂಕುಮಾಸಂಗಪಿಂಗಮ್ ।**
**ಸಾಯಂ ಪ್ರಾತರ್ಮುನೀನಾಂ ಕುಶಕುಸುಮಚಯೈಶ್ಛನ್ನತೀರಸ್ಥನೀರಮ್**
**ಪಾಯಾನ್ನೋ ಗಾಂಗಮಂಭಃ**
**ಕರಿಕಲಭಕರಾಕ್ರಾಂತರಂಹಸ್ತರಂಗಮ್ ॥೩॥**

**ಅನ್ವಯ: ಮಜ್ಜನ್ಮಾತಂಗಕುಂಭಚ್ಯುತಮದಮದಿರಾಮೋದ-ಮತ್ತಾಲಿಜಾಲಂ**– ನೀರಿನಲ್ಲಿ ಸ್ನಾನ ಮಾಡುತ್ತಿರುವ ಆನೆಗಳ ಕುಂಭದಿಂದ ದ್ರವಿಸುತ್ತಿರುವ ಮದೋದಕವನ್ನು ಸೇವಿಸಿ ಉನ್ಮತ್ತರಾಗಿರುವ ದುಂಬಿಗಳ ಸಮೂಹದಿಂದ ಕೂಡಿರುವ, **ಸಿದ್ಧಾಂಗನಾನಾಂ**– ಸಿದ್ಧಪುರುಷರ ಸ್ತ್ರೀಯರ, **ಸ್ನಾನೈಃ**- ಸ್ನಾನದಿಂದಾಗಿ, **ಕುಚಯುಗವಿಲಸತ್ಕುಂಕುಮಾಸಂಗಪಿಂಗಮ್**– ವಕ್ಷೋಜಗಳಿಗೆ ಲೇಪಿಸಿಕೊಂಡಿರುವ ಕುಂಕುಮವು ಕರಗಿಹೋಗಿ ಕೆಂಪಾಗಿರುವ ನೀರುಳ್ಳ, **ಸಾಯಂ ಪ್ರಾತಃ**– ಬೆಳಿಗ್ಗೆ ಮತ್ತು ರಾತ್ರಿ, **ಮುನೀನಾಂ**– ಮುನಿಗಳ (ಪೂಜಾಪ್ರಕ್ರಿಯೆಯಿಂದ), **ಕುಶಕುಸುಮಚಯೈಃ**- ದರ್ಭೆ ಮತ್ತು ಹೂವುಗಳ ರಾಶಿಯಿಂದ, **ಛನ್ನತೀರಸ್ಥನೀರಮ್**- ಆವೃತವಾದ ತಟದ ನೀರುಳ್ಳ, **ಕರಿಕಲಭಕರಾಕ್ರಾಂತರಂಹಸ್ತರಂಗಮ್**- ಆನೆಗಳ ಮತ್ತು ಅವುಗಳ ಮರಿಗಳ ಸೊಂಡಿಲಿನ ಕ್ರೀಡೆಯಿಂದ ಉಂಟಾದ ಅಲೆಗಳುಳ್ಳ, **ಗಾಂಗಮಂಭಃ**– ಗಂಗಾನದಿಯ ನೀರು, **ನಃ**– ನಮ್ಮನ್ನು **ಪಾಯಾತ್**– ಕಾಪಾಡಲಿ.

**ತಾತ್ಪರ್ಯ-** ಗಂಗಾನದಿಯಲ್ಲಿ ಮದಭರಿತ ಆನೆಗಳು ಸ್ನಾನ ಮಾಡುತ್ತಿರುತ್ತವೆ. ಅವುಗಳ ಕುಂಭಸ್ಥಾನದಿಂದ ಮದೋದಕವು ಸುರಿಯುತ್ತಿರುತ್ತದೆ. ಅದನ್ನು ಕುಡಿಯಲೆಂದು ಬಂದ ದುಂಬಿಗಳಿಂದ ಗಂಗೆಯು ತುಂಬಿಹೋಗಿದೆ. ಸಿದ್ಧಸ್ತ್ರೀಯರು ಗಂಗೆಯಲ್ಲಿ ಸ್ನಾನವನ್ನು ಮಾಡುವಾಗ ಆ ಸ್ತ್ರೀಯರು ತಮ್ಮ ಎದೆಯ ಭಾಗದಲ್ಲಿ ಹಚ್ಚಿಕೊಂಡ ಕುಂಕುಮವು ಕರಗಿಹೋಗಿರುವುದರಿಂದ ಇಡೀ ಗಂಗೆಯೇ ಆ ಕುಂಕುಮದಿಂದಾಗಿ ಕೆಂಪಾಗಿ ಕಾಣಿಸುತ್ತದೆ. ಜೊತೆಗೆ ಸಂಧ್ಯಾಸಮಯದಲ್ಲಿ ಗಂಗಾತಟದಲ್ಲಿನ ಮುನಿಗಳು ತಮ್ಮ ನಿತ್ಯಕರ್ಮವನ್ನು ಅಲ್ಲಿ ನೆರವೇರಿಸುವುದರಿಂದಾಗಿ ಇಡೀ ಗಂಗಾತಟವು ಅಲ್ಲಲ್ಲಿ ದರ್ಭೆ ಮತ್ತು ಹೂವುಗಳ ರಾಶಿಯಿಂದ ಆವೃತವಾಗಿರುತ್ತದೆ. ಗಂಗೆಯಲ್ಲಿ ನೀರು ಕುಡಿಯಲೆಂದು ಬಂದ ಆನೆಗಳ ಹಿಂಡು ತಮ್ಮ ಮರಿಗಳೊಡನೆ ಸೊಂಡಿಲಿನಿಂದ ಜಲಕ್ರೀಡೆ ಆಡುವಾಗ ‘ಇಡೀ ಗಂಗೆಯು ಅಲೆಗಳಿಂದ ಕೂಡಿ ಸೊಗಸಾಗಿ ಕಾಣಿಸುತ್ತದೆ. ಇಂಥ ದಿವ್ಯ ಗಂಗೆಯು ನಮ್ಮನ್ನೆಲ್ಲ ಕಾಪಾಡಲಿ.

**ಆದಾವಾದಿಪಿತಾಮಹಸ್ಯ ನಿಯಮವ್ಯಾಪಾರಪಾತ್ರೇ ಜಲಂ**
**ಪಶ್ಚಾತ್ ಪನ್ನಗಶಾಯಿನೋ ಭಗವತಃ ಪಾದೋದಕಂ ಪಾವನಮ್ |**
**ಭೂಯಃ ಶಂಭುಜಟಾವಿಭೂಷಣಮಣಿರ್ಜಹ್ನೋರ್ಮಹರ್ಷೇರಿಯಮ್**
**ಕನ್ಯಾ ಕಲ್ಮಷನಾಶಿನೀ ಭಗವತೀ ಭಾಗೀರಥೀ ಭೂತಲೇ ||೪||**

**ಅನ್ವಯ: ಆದೌ–** ಮೊದಲು, **ಆದಿಪಿತಾಮಹಸ್ಯ–** ಬ್ರಹ್ಮನ, **ನಿಯಮವ್ಯಾಪಾರಪಾತ್ರೇ–** ಜಪತಪಾದಿ ಅನುಷ್ಠಾನಗಳಿಗೋಸ್ಕರ ವಿನಿಯೋಗಿಸುವ ಕಲಶದಲ್ಲಿ, **ಜಲಂ-** ನೀರಿನ ರೂಪದಲ್ಲಿಯೂ, **ಪಶ್ಚಾತ್–** ಅನಂತರ, **ಭಗವತಃ–** ಭಗವಂತನಾದ, **ಪನ್ನಗಶಾಯಿನಃ–** ಆದಿಶೇಷನ ಮೇಲೆ ಪವಡಿಸಿರುವ ಶ್ರೀಹರಿಯ, **ಪಾವನಂ**

**ಪಾದೋದಕಂ–** ಪಾದವನ್ನು ಪ್ರಕ್ಷಾಲಿಸಿದ ಪವಿತ್ರ ತೀರ್ಥವಾಗಿಯೂ, **ಭೂಯಃ–** ಆಮೇಲೆ, **ಶಂಭುಜಟಾವಿಭೂಷಣಮಣಿಃ-** **ಶಿವನ** ಜಟೆಗೆ ಅಲಂಕಾರವಾದ ಆಭರಣರೂಪದಲ್ಲಿಯೂ, **ಜನ್ಹೋಃ ಮಹರ್ಷೇಃ ಕನ್ಯಾ–** ಜಹ್ನು ಮಹರ್ಷಿಯ ಕನ್ಯೆಯ ರೂಪದಲ್ಲಿಯೂ ರೂಪ ತಾಳಿದ, **ಕಲ್ಮಷನಾಶಿನೀ ಇಯಂ ಭಗವತೀ–**ಪಾಪನಾಶಿನಿಯಾದ ಈ ಭಗವತಿಯು, **ಭಾಗೀರಥೀ–** ಭಗೀರಥನ ಯತ್ನದಿಂದ ಭಾಗೀರಥಿಯಾಗಿ, **ಭೂತಲೇ–** ಭೂಮಿಯಲ್ಲಿ ಅವತರಿಸಿದಳು.

**ತಾತ್ಪರ್ಯ:** ಗಂಗೆಯು ನಾನಾ ರೂಪದಲ್ಲಿ ಅವತರಿಸಿ ಪ್ರಸಿದ್ಧಳಾಗಿದ್ದಾಳೆ. ಆಕೆ ತ್ರಿಮೂರ್ತಿಗಳ ಸೇವೆಯನ್ನು ಗೈದು ಆಮೇಲೆ ಸಕಲ ಜೀವಜಂತುಗಳನ್ನು ಪಾವನಗೊಳಿಸುವ ಸಲುವಾಗಿ ಭೂಲೋಕದವರೆಗೂ ಪ್ರವಹಿಸಿ ಅನುಗ್ರಹಿಸಿದವಳು. ಸೃಷ್ಟಿಯ ಆರಂಭದಲ್ಲಿ ಗಂಗೆಯು ಬ್ರಹ್ಮನ ಕಲಶದಲ್ಲಿ ಪವಿತ್ರ ಜಲದ ರೂಪದಲ್ಲಿಯೂ, ಆಮೇಲೆ ಆದಿಶೇಷನ ಮೇಲೆ ಪವಡಿಸಿರುವ ಭಗವಾನ್ ವಿಷ್ಣುವಿನ ಪಾದವನ್ನು ಪ್ರಕ್ಷಾಲಿಸುವ ತೀರ್ಥವಾಗಿಯೂ, ಅನಂತರ ಪರಶಿವನ ಜಟೆಯನ್ನೇ ಏರಿ ಅದಕ್ಕೆ ಅಲಂಕಾರ ಪ್ರಾಯವಾಗಿ ರೂಪತಳೆದ ಜಹ್ನುವಿನ ಸುತೆಯೂ, ಕಾಲಾಂತರದಲ್ಲಿ ಭಗೀರಥನ ತಪಸ್ಸಿನಿಂದ ಸಕಲ ಜೀವಲೋಕವನ್ನು ಅನುಗ್ರಹಿಸುವ ಸಲುವಾಗಿ ಭೂಲೋಕಕ್ಕೆ ಇಳಿದು ಬಂದು ನಮ್ಮನ್ನೆಲ್ಲ ಅನುಗ್ರಹಿಸುತ್ತಿದ್ದಾಳೆ.

**ಶೈಲೇಂದ್ರಾದವತಾರಿಣೀ ನಿಜಜಲೇಮಜ್ಜಜ್ಜನೋತ್ತಾರಿಣೀ**
**ಪಾರಾವಾರವಿಹಾರಿಣೀ ಭವಭಯಶ್ರೇಣೀ ಸಮುತ್ಸಾರಿಣೀ |**
**ಶೇಷಾಂಗೈರನುಕಾರಿಣೀ ಹರಶಿರೋವಲ್ಲೀದಲಾಕಾರಿಣೀ**
**ಕಾಶೀಪ್ರಾಂತವಿಹಾರಿಣೀ ವಿಜಯತೇ ಗಂಗಾ ಮನೋಹಾರಿಣೀ ||೫||**

**ಅನ್ವಯ: ಶೈಲೇಂದ್ರಾತ್–** ಮೇರುಪರ್ವತದಿಂದ, **ಅವತಾರಿಣೀ-** ಕೆಳಗೆ ಇಳಿಯುತ್ತಿರುವ, **ನಿಜಜಲೇ–** ತನ್ನ ನೀರಿನಲ್ಲಿ, **ಮಜ್ಜತ್ ಜನೋತ್ತಾರಿಣೀ–** ಪುಣ್ಯಾವಗಾಹ ಮಾಡುವವರನ್ನು ಉದ್ಧರಿಸುವವಳೂ, **ಪಾರಾವಾರವಿಹಾರಿಣೀ-** ಸಮುದ್ರವನ್ನು ಸೇರಿ ವಿಹರಿಸುವವಳೂ, **ಭವಭಯಶ್ರೇಣೀಸಮುತ್ಸಾರಿಣೀ-** ಸಂಸಾರದ ಭಯ ಪರಂಪರೆಯನ್ನು ನಾಶಗೈಯುವವಳೂ, **ಶೇಷಾಂಗೈರನುಕಾರಿಣೀ-** ಆದಿಶೇಷನ ಅಂಗಚಲನೆಯನ್ನು ಅನುಕರಿಸುವವಳೂ, **ಹರಶಿರೋವಲ್ಲೀ-ದಲಾಕಾರಿಣೀ-** ಶಿವನ ತಲೆಯಲ್ಲಿರುವ ಎಲೆಯ ಆಕಾರದಂತೆ ಕಾಣಿಸುವ, **ಕಾಶೀಪ್ರಾಂತವಿಹಾರಿಣೀ–** ಕಾಶೀ ವಿಶ್ವನಾಥನ ಸನ್ನಿಧಿಯಲ್ಲಿ ಪ್ರವಹಿಸುತ್ತಿರುವ, **ಮನೋಹಾರಿಣೀ–** ಮನೋಹಾರಿಣಿಯಾದ, **ಗಂಗಾ ವಿಜಯತೇ–** ಗಂಗೆಯು ಶೋಭಿಸುತ್ತಾಳೆ.

**ತಾತ್ಪರ್ಯ:** ಸಕಲ ಪರ್ವತಗಳ ರಾಜನಾದ ಮೇರುಪರ್ವತದಿಂದ ಕೆಳಗೆ ಧುಮುಕುತ್ತಿರುವ ಗಂಗೆಯು ತನ್ನಲ್ಲಿ ಸ್ನಾನ ಮಾಡುವ ಸಕಲರನ್ನೂ ಉದ್ಧರಿಸುತ್ತಾಳೆ. ಅಷ್ಟು ಪುಣ್ಯದಾಯಿ ಆಕೆ. ಅಷ್ಟೇ ಅಲ್ಲ, ಕೊನೆಗೆ ಸಮುದ್ರವನ್ನು ಸೇರಿ ತನ್ನನ್ನು ಹಿಗ್ಗಿಸಿಕೊಳ್ಳುವ ಗಂಗೆಯು ಸಂಸಾರದ ಭಯದಿಂದ ನಮ್ಮನ್ನು ಮುಕ್ತರನ್ನಾಗಿಸುವಷ್ಟು ದಿವ್ಯಳು. ಆಕೆಯ ಹರಿವನ್ನು ನೋಡಿದರೆ ಆದಿಶೇಷನ ದೇಹದ ಬಳುಕಿನಂತೆ ಕಾಣುವುದಲ್ಲದೇ ತರಂಗಗಳ ಮೂಲಕ ಶೇಷನ ಶಿರಃಕಂಪನವನ್ನೇ ನೆನಪಿಸುತ್ತಾಳೆ. ಶಿವನ ಜಟೆಯನ್ನು ಅಲಂಕರಿಸಿರುವ ಗಂಗೆಯು ಶಿವನ ತಲೆಯ ಮೇಲಿರುವ ವೀಳ್ಯದೆಲೆಯ ಆಕಾರದಲ್ಲಿ ಕಾಣಿಸುತ್ತಾಳೆ. ಕಾಶೀವಿಶ್ವನಾಥನ ಸನ್ನಿಧಿಯಲ್ಲಿ ಪ್ರವಹಿಸುತ್ತಿರುವ, ಸಕಲ ಜನರ ಮನಸ್ಸನ್ನು ಸೆಳೆಯುವ ಗಂಗೆಗೆ ಜಯವಾಗಲಿ.

**ಕುತೋಽವೀಚೀ ವೀಚಿಸ್ತವ ಯದಿ ಗತಾ ಲೋಚನಪಥಂ**
**ತ್ವಮಾಪೀತಾ ಪೀತಾಂಬರಪುರನಿವಾಸಂ ವಿತರಸಿ |**
**ತ್ವದುತ್ಸಂಗೇ ಗಂಗೇ ಪತತಿ ಯದಿ ಕಾಯಸ್ತನುಭೃತಾಂ**
**ತದಾ ಮಾತಃ ಶಾತಕ್ರತವಪದಲಾಭೋಽಪ್ಯತಿಲಘುಃ ||೬||**

**ಅನ್ವಯ: ತವ ವೀಚಿಃ–** ನಿನ್ನ ತರಂಗವು, **ಯದಿ–** ಒಂದು ವೇಳೆ, **ಲೋಚನಪಥಂ ಗತಾ–** ದೃಷ್ಟಿಗೋಚರವಾದರೆ, **ಕುತೋ ಅವೀಚೀ–** ನರಕವು ಎಲ್ಲಿಂದ? **ತ್ವಮ್–** ನೀನು, **ಆಪೀತಾ–** ಕುಡಿಯಲ್ಪಟ್ಟರೆ, **ಪೀತಾಂಬರನಿವಾಸಂ–** ವೈಕುಂಠವನ್ನು, **ವಿತರಸಿ–** ದೊರಕಿಸುವೆ. **ಗಂಗೇ–** ಹೇ ಗಂಗೆಯೇ! **ತ್ವದುತ್ಸಂಗೇ–** ನಿನ್ನ ಮಡಿಲಲ್ಲಿ, **ಯದಿ–** ಒಂದು ವೇಳೆ, **ತನುಭೃತಾಂ–** ಜೀವಿಗಳ, **ಕಾಯಃ–** ದೇಹವು, **ಪತತಿ–** ಬಿದ್ದರೆ, **ತದಾ–** ಆಗ **ಮಾತಃ–** ಹೇ ಮಾತೆಯೇ, **ಶಾತಕ್ರತವಪದಲಾಭೋಽಪಿ–** ಇಂದ್ರಪದವಿಯ ಪ್ರಾಪ್ತಿಯೂ, **ಅತಿ ಲಘುಃ–** ಅತ್ಯಂತ ಚಿಕ್ಕದೆನಿಸುವುದು.

**ತಾತ್ಪರ್ಯ:** ಗಂಗೆಯು ಎಷ್ಟು ಮಹಿಮಾನ್ವಿತಳೆಂದರೆ ಆಕೆಯ ವೀಚಿವಿಲಾಸವನ್ನು ಒಮ್ಮೆ ಕಣ್ಣಾರೆ ನೋಡಿದರೂ ಸಾಕು ನರಕದ ಕಷ್ಟಗಳೆಲ್ಲ ದೂರ ಸರಿಯುವವು. ಒಂದು ವೇಳೆ ಗಂಗೆಯ ಒಂದು ಹನಿಯನ್ನಾದರೂ ಸೇವಿಸಿದ್ದೇ ಆದರೆ ಆಕೆಯು ಪೀತಾಂಬರನಾದ ವಿಷ್ಣುವಿನ ವೈಕುಂಠವನ್ನೇ ನಮಗೆ ಲಭ್ಯವಾಗಿಸುವಳು. ಇನ್ನು ಗಂಗೆಯ ಮಡಿಲಲ್ಲಿ ಪ್ರಾಣತ್ಯಾಗ ಮಾಡಿದರಂತೂ ಇಂದ್ರನ ಪದವಿಯೂ ಅತ್ಯಂತ ಚಿಕ್ಕದೆನಿಸುವಂಥ ಹೆಚ್ಚಿನ ಶ್ರೇಯಸ್ಸು ಲಭಿಸುವುದು.

**ಗಂಗೇ ತ್ರೈಲೋಕ್ಯಸಾರೇ ಸಕಲಸುರವಧೂಧೌತವಿಸ್ತೀರ್ಣತೋಯೇ**
**ಪೂರ್ಣಬ್ರಹ್ಮಸ್ವರೂಪೇ ಹರಿಚರಣರಜೋಹಾರಿಣಿ ಸ್ವರ್ಗಮಾರ್ಗೇ |**

**ಪ್ರಾಯಶ್ಚಿತ್ತಂ ಯದಿ ಸ್ಯಾತ್ತವಜಲಕಣಿಕಾ ಬ್ರಹ್ಮಹತ್ಯಾದಿಪಾಪೇ**
**ಕಸ್ತ್ವಾಂ ಸ್ತೋತುಂ ಸಮರ್ಥಸ್ತ್ರಿಜಗದಘಹರೇ**
**ದೇವಿ ಗಂಗೇ ಪ್ರಸೀದ ||೭||**

**ಅನ್ವಯ:** ಗಂಗೇ– ಹೇ ಗಂಗೆಯೇ! **ತ್ರೈಲೋಕ್ಯಸಾರೇ-** ತ್ರಿಲೋಕಗಳ ಸಂಪದ್ರೂಪಳೇ, **ಸಕಲಸುರವಧೂಧೌತವಿಸ್ತೀರ್ಣತೋಯೇ–** ಸ್ವರ್ಗದ ಎಲ್ಲ ದೇವತೆಗಳ ಸ್ತ್ರೀಯರು ಸ್ನಾನ ಮಾಡುವಷ್ಟು ವಿಸ್ತೀರ್ಣಳೇ, **ಪೂರ್ಣಬ್ರಹ್ಮಸ್ವರೂಪೇ-** ಪೂರ್ಣಬ್ರಹ್ಮದ ಸ್ವರೂಪಳೇ, **ಹರಿಚರಣರಜೋಹಾರಿಣಿ-** ಹರಿಯ ಪಾದಗಳ ಧೂಳನ್ನು ತೊಳೆಯುವವಳೇ, **ಸ್ವರ್ಗಮಾರ್ಗೇ-** ಸ್ವರ್ಗದ ಹಾದಿಯಲ್ಲಿ ಪ್ರವಹಿಸುವವಳೇ, **ಯದಿ-** ಒಂದು ವೇಳೆ, **ತವ ಜಲಕಣಿಕಾ–** ನಿನ್ನ ನೀರಿನ ಹನಿ(ಯೊಂದರ ಸ್ಪರ್ಶವಾದರೂ), **ಬ್ರಹ್ಮಹತ್ಯಾದಿಪಾಪೇ–** ಬ್ರಹ್ಮಹತ್ಯೆಯೇ ಮೊದಲಾದ ಮಹಾಪಾತಕಕ್ಕೆ, **ಪ್ರಾಯಶ್ಚಿತ್ತಂ ಸ್ಯಾತ್–** ಪ್ರಾಯಶ್ಚಿತ್ತವಾಗಬಲ್ಲುದು. **ತ್ವಾಂ–** ನಿನ್ನನ್ನು, **ಸ್ತೋತುಂ-** ಸ್ತುತಿಸಲು, **ಸಮರ್ಥಃ–** ಸಮರ್ಥನು, **ಕಃ–** ಯಾರು (ತಾನೇ ಇರಲು ಸಾಧ್ಯ)? **ತ್ರಿಜಗದಘಹರೇ** - ಮೂಲೋಕಗಳ ಪಾಪಗಳನ್ನೂ ನಾಶ ಮಾಡುವವಳೇ, **ದೇವಿ ಗಂಗೇ–** ಹೇ ದೇವಿ ಗಂಗೆಯೇ, **ಪ್ರಸೀದ–** ಪ್ರಸನ್ನಳಾಗು.

ತಾತ್ಪರ್ಯ: ಗಂಗೆಯು ಮೂರು ಲೋಕಕ್ಕೂ ಅತ್ಯಂತ ಮುಖ್ಯಳಾದವಳು. ಸಂಪತ್ತಿನ ರೂಪದಲ್ಲಿರುವವಳು, ಅವಳ ವಿಸ್ತೀರ್ಣ ಎಷ್ಟೆಂದರೆ ದೇವಲೋಕದ ಎಲ್ಲ ಸ್ತ್ರೀಯರೂ ಸ್ನಾನ ಮಾಡಬಹುದಾದಷ್ಟು. ಆಕೆ ಆಧ್ಯಾತ್ಮಿಕವಾಗಿ ಸಚ್ಚಿದಾನಂದಸ್ವರೂಪಳೇ ಆಗಿದ್ದಾಳೆ. ಶ್ರೀಹರಿಯ ಪಾದದ ಧೂಳನ್ನು ಪ್ರಕ್ಷಾಳಿಸಿ ಅದನ್ನು ತನ್ನಲ್ಲಿ ಒಯ್ಯುವವಳೂ ಹೌದು. ಸ್ವರ್ಗದ ಮಾರ್ಗದಲ್ಲಿ ಹರಿಯುವ ಈಕೆಯ

ಒಂದೇ ಒಂದು ಕಣವನ್ನು ಸ್ಪರ್ಶಿಸಿದರೂ ಅದು ಬ್ರಹ್ಮಹತ್ಯೆಯೇ ಮೊದಲಾದ ಮಹಾಪಾತಕಗಳಿಗೂ ಪ್ರಾಯಶ್ಚಿತ್ತವಾಗಬಲ್ಲುದೋ ಅಂಥ ಮೂಲೋಕದ ಪಾಪಗಳೆಲ್ಲವನ್ನು ಪರಿಹರಿಸುವ ದೇವಿ ಗಂಗೆಯನ್ನು ಸ್ತುತಿಸಲು ಯಾರು ತಾನೇ ಶಕ್ತನಾದಾನು? ಅಂಥ ದೇವಿ ಗಂಗೆಯು ನಮ್ಮೆಲ್ಲರ ವಿಷಯದಲ್ಲಿ ಪ್ರಸನ್ನಳಾಗಿ ಹರಸಲಿ.

**ಭಗವತಿ ತವ ತೀರೇ ನೀರಮಾತ್ರಾಶನೋಽಹಂ**
**ವಿಗತವಿಷಯತೃಷ್ಣಃ ಕೃಷ್ಣಮಾರಾಧಯಾಮಿ ।**
**ಸಕಲಕಲುಷಭಂಗೇ ಸ್ವರ್ಗಸೋಪಾನಸಂಗೇ**
**ತರಲತರತರಂಗೇ ದೇವಿ ಗಂಗೇ ಪ್ರಸೀದ ॥೮॥**

**ಅನ್ವಯ: ಭಗವತಿ–** ಹೇ ದೇವಿಯೇ, **ತವ ತೀರೇ–** ನಿನ್ನ ತಟದಲ್ಲಿ, **ನೀರಮಾತ್ರಾಶನೋ ಅಹಮ್–** ನಾನು ಕೇವಲ ಜಲವನ್ನು ಮಾತ್ರ ಸ್ವೀಕರಿಸುವವನಾಗಿ, **ವಿಗತವಿಷಯತೃಷ್ಣಃ–** ವಿಷಯಗಳ ದಾಹವನ್ನು ಬಿಟ್ಟವನಾಗಿ, **ಕೃಷ್ಣಮ್ ಆರಾಧಯಾಮಿ–** ಕೃಷ್ಣನನ್ನು ಆರಾಧಿಸುತ್ತೇನೆ**.** **ಸಕಲಕಲುಷಭಂಗೇ–** ಎಲ್ಲ ಪಾಪಗಳನ್ನೂ ಪರಿಹರಿಸುವವಳೇ, **ಸ್ವರ್ಗಸೋಪಾನಸಂಗೇ–** ಸ್ವರ್ಗಕ್ಕೆ ಮೆಟ್ಟಿಲಾಗಿರುವವಳೇ, **ತರಲತರತರಂಗೇ–** ಅತ್ಯಂತ ಚಂಚಲವಾದ ತರಂಗಗಳಿಂದ ಕೂಡಿದವಳೇ, **ದೇವಿ ಗಂಗೇ–** ದೇವಿ ಗಂಗೆಯೇ, **ಪ್ರಸೀದ–** ಪ್ರಸನ್ನಳಾಗು**.**

**ತಾತ್ಪರ್ಯ:** ಹೇ ದೇವಿಯೇ ನಿನ್ನ ತಟದಲ್ಲಿ ನೀರನ್ನು ಮಾತ್ರ ಕುಡಿಯುತ್ತಾ ಉಪವಾಸವ್ರತವನ್ನು ಆಚರಿಸುತ್ತಿದ್ದೇನೆ. ವಿಷಯಗಳ ಆಸೆಯನ್ನು ಬಿಟ್ಟವನಾಗಿ ಕೃಷ್ಣನನ್ನು ಆರಾಧಿಸುತ್ತೇನೆ. ಜೀವಿಗಳ ಪಾಪವನ್ನೆಲ್ಲ ನಾಶಗೊಳಿಸುವ ಮತ್ತು ಸ್ವರ್ಗಕ್ಕೆ ಮೆಟ್ಟಿಲಿನಂತಿರುವ